ತಾರೀಖು 19ನೆ ಮಾರ್ಚ 1907.

ನಂ. ರೆ. 8602—ಲ್ಯಾ. ರೆ. 479-06—3, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಶನ್ ರಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿಯ ವಿವರಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ, ಎಂದರೆ, ತೀರ್ಥಕೆರೆ ತಾಲ್ಲೂಕು ಬೆಳೇನಹಳ್ಳಿ ಮತ್ತು ಪೆರವೇನಹಳ್ಳಿ ಗ್ರಾಮಗಳ ದನಗಳು ತಿರುಗಾಡಲು ದಾರಿ ಮಾಡುವುದಕ್ಕೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ತೀರ್ಥಕೆರೆ ಸಬ್ ಡಿವಿಜನ್ನಿನ ಚಾರ್ಜ್‌ನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೇ ನಂಬರು.	ಪೈಕಿ ಅಂ ಡಿ ಮಿಷ್ಟ್ ಬಗೈರಾಯತ.	ಒಟ್ಟು ವಿಸ್ತೀರ್ಣ.		ಕಂದಾಯ.	ಈಗ ಸರಕಾರಕ್ಕೆ ಬೀಳುವ ವಿಸ್ತೀರ್ಣ.	ಚತುರ್ಗಡಿ.			
											ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.	ರೂ. ಆ.	ಎ. ಗು.				
ಕಡೂರು.	ತೀರ್ಥಕೆರೆ.	ತೀರ್ಥಕೆರೆ.	ಬಳೇನಹಳ್ಳಿ	ಚೆಂದಯ್ಯ ಬಿನ್ ಮಲ್ಲಯ್ಯ	27	ಖುಷ್ಕಿ	1	14	1 14	0 4	ರೈಲ್ವೆ ಗೇಟು	ಬೆಳೇನಹಳ್ಳಿ ಗ್ರಾಮ.	ಸರ್ವೆ 27ನೆ ನಂಬರು.	ಸರ್ವೆ 27ನೆ ನಂಬರು.
				ಡಿಟೋ ..	24	ಡಿಟೋ	3	16	2 8	0 15	ಬಳೇನಹಳ್ಳಿ ಗ್ರಾಮ.	ರೈಲ್ವೆ ಗೇಟು.	ರುದ್ರಯ್ಯ ಬಿನ್ ನಂಜೈಯ್ಯನ ಜಮೀನು.	ಸರ್ವೆ 26ನೆ ನಂಬರು.
				ಕೂಡಿ ಮತ್ತರವಹಿವಾಟುದಾರ ಸುಬ್ಬಂಣಾಚಾರ್.	15	ಡಿಟೋ	12	29	8 0	0 19	ಶಿವಮೊಗ್ಗೆಗೆ ಹೋಗುವ ಛಾಟಿ ನಮಾರ್ಗ.	ಪೆರವೇನಹಳ್ಳಿ ಗ್ರಾಮ.	ಶಿವಮೊಗ್ಗೆಗೆ ಹೋಗುವ ಛಾಟಿಮಾರ್ಗ.	ಪೆರವೇನಹಳ್ಳಿ ಗ್ರಾಮ.

ತಾರೀಖು 3ನೆ ಏಪ್ರಿಲ್ 1907.

ನಂ. ಫೈ. 7515—ಎಸ್. ಆರ್. 189-06-4, ಸ್ಯ 1901ನೆ ಇಸವಿಯ 5ನೆ ನಂಬರ್ ಮೈಸೂರು ಎಕ್ಸೈಜ್ ರಗ್ಯುಲೇಷನಿನ 29ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನೂ ಮತ್ತು ಈ ವಿಷಯದಲ್ಲಿ ಸಹಾಯಕವಾದ ಇತರ ಎಲ್ಲಾ ಅಧಿಕಾರಗಳನ್ನೂ ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1902ನೆ ಇಸವಿಯ ಜನವರಿ 10ನೆ ತಾರೀಖಿನ 11469—ಎಕ್ಸೈಜ್. 3—1901ನೆ ನಂಬುನ ಸರ್ಕಾರಿ ಇಸ್ತಿಹಾರ್‌ನಾಮೆಯ ಮೇರೆಗೆ ಪ್ರಸಿದ್ಧಪಡಿಸಲ್ಪಟ್ಟು ಆಗಾಗ್ಗೆ ತಿದ್ದುಪಾಟಾದ ಅನ್ಯದೇಶೀಯ ಮದ್ಯ ಸಂಬಂಧವಾದ ನಿಬಂಧನೆಗಳಿಗೆ ಈ ಕೆಳಗೆ ಹೇಳುವ ತಿದ್ದುಪಾಟುಗಳನ್ನು ಮಾಡಲು ಹುಕುಂ ದಯ ಪಾಲಿಸುತ್ತಾರೆ:

(1) ಈ ಕೆಳಗಿನದನ್ನು XIIIನೆ ನಿಬಂಧನೆಯ ಕೆಳಗೆ ಸೇರಿಸತಕ್ಕದ್ದು:

"XIII a. ಜನರಿಗೆ ಒಳ್ಳೆ ಆರೋಗ್ಯಕರವಾದ ಪದಾರ್ಥಗಳನ್ನು ಸರಬರಾಯಿ ಮಾಡುವುದರಲ್ಲಿ ಕ್ರಮವಾಗಿ ಪೋಟಾ ಪೋಟಿಯನ್ನುಂಟುಮಾಡುವುದಕ್ಕೂ ಮಾರುವ ಹಕ್ಕನ್ನು ಒಬ್ಬನೇ ಆಕ್ರಮಿಸುವುದನ್ನು ತಪ್ಪಿಸುವುದಕ್ಕೂ ಎಕ್ಸೈಜ್ ಕಮಿಷನರು, ಬಂದು ಗ್ರಾಮದಲ್ಲಿ ಅಥವಾ ಪಟ್ಟಣದಲ್ಲಿ ಲಭವಾ ಸಿಟಿ ಯಾ ನಗರದಲ್ಲಿ 11ನೆ ನಿಬಂಧನೆಯ 2 ಮತ್ತು 5 (b) ಪರಿಚ್ಛೇದಗಳ ಮೇರೆಗೆ ತೆಗೆದುಕೊಳ್ಳಲ್ಪಡುವ ಲೈಸೆನ್ಸು ಯಾ ಲೈಸೆನ್ಸುಗಳ ಸಂಖ್ಯೆಯನ್ನು ಗೊತ್ತು ಮಾಡತಕ್ಕದ್ದು. ಲೈಸೆನ್ಸಿನ ವಾಯಿದೆಯು ಸಾಧಾರಣವಾಗಿ ಮೂರು ವರ್ಷಗಳಾಗಿರತಕ್ಕದ್ದು. ನಿಜವಾದ ಪೋಟಾಪೋಟಿಯು ಇರಬಹುದೆಂದು ತೋರುವ ಸ್ಥಳಗಳಲ್ಲಿ, ಎಕ್ಸೈಜ್ ಕಮಿಷನರು ಆಗಾಗ್ಗೆ ಗೊತ್ತುಮಾಡಬಹುದಾದ ಪರತ್ತುಗಳಿಗೆ ಬಳಪಟ್ಟು, ಸದರಿ ಲೈಸೆನ್ಸು ಯಾ ಲೈಸೆನ್ಸುಗಳನ್ನು ಹೊಂದುವ ಹಕ್ಕನ್ನು ಬಹಿರಂಗವಾಗಿ ಹರಾಜು ಹಾಕುವಂತೆ ಅವರು ಹುಕುಂ ಮಾಡಬಹುದು.

ತಾರೀಖು 5ನೆ ಏಪ್ರಿಲ್ 1907.

ನಂ. ಆರ್. 9018—ಎಲ್. ಆರ್. 427-06-4, ರವಿನ್ಯೂ ಕಮಿಷನರಿಗೆ ಅಸಿಸ್ಟೆಂಟರಾದ ಮಿ॥ ವಿ. ಆರ್. ತ್ಯಾಗರಾಜ ಐಯ್ಯರ್, ಎಂ. ಎ., ಯವರಿಗೆ 1907ನೆ ಇಸವಿಯ ಜನವರಿ 28ನೆ ತಾರೀಖಿನ ಆರ್. 7165—ಎಲ್. ಆರ್. 427-06-2ನೆ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ಒಂದೂವರೆ ತಿಂಗಳ ಪ್ರಿವಿಲೇಜ್ ರಜಾವನ್ನು ಇನ್ನೂ ಒಂದು ತಿಂಗಳವರೆಗೆ ಹೆಚ್ಚಿಸಿ ಇದೆ.

ತಾರೀಖು 9ನೆ ಏಪ್ರಿಲ್ 1907.

ನಂ. ಆರ್. 9056—ಎಲ್. ಆರ್. 38-06-20, ಅಸಿಸ್ಟೆಂಟ್ ಕಮಿಷನರ್ ಮಿ॥ ಟಿ. ಜೋಕ್ಕಣ್ಣನವರಿಗೆ 1906ನೆ ಇಸವಿಯ ಡಿಸೆಂಬರ್ 6ನೆ ತಾರೀಖಿನ ಆರ್. 5696-ಎಲ್. ಆರ್. 38-06-8ನೆ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ 2 ತಿಂಗಳು 17 ದಿವಸಗಳ ಪ್ರಿವಿಲೇಜ್ ರಜಾವಿನ ಜತೆಗೆ ಹೆಚ್ಚಿಗೆ 6 ದಿವಸಗಳ ರಜಾಕೊಟ್ಟಿದೆ, ಮತ್ತು ಅವರಿಗೆ ಈ ರಜಾವಿನ ಜತೆಯಲ್ಲಿ ವೈದ್ಯರ ಸರ್ಟಿಫಿಕೇಟಿನ ಮೇಲೆ ಕೊಡುವ ರಜಾವನ್ನು 4 ತಿಂಗಳು 24 ದಿವಸಗಳವರೆಗೆ ಕೊಟ್ಟಿದೆ.